ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/ನೋಂದಣಿ/01/2017-18 ದಿನಾಂಕ 21/12/2017

– ಸುತ್ತೋಲೆ –

ವಿಷಯ : ಏಪ್ರಿಲ್-2018 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ವಿದ್ಯಾರ್ಥಿಗಳ ನೋಂದಣಿ ಮಾಹಿತಿಗಳನ್ನು ಎಸ್.ಎ.ಟಿ.ಎಸ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ ನಂತರ ಕ್ಯೂ.ಪಿ.ಆರ್. ಪರಿಶೀಲಿಸಿ ಮಾಹಿತಿಗಳನ್ನು ಫ್ರೀಜ್ ಮಾಡುವ ಬಗ್ಗೆ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮಾರ್ಚ್-2018 ವಿದ್ಯಾರ್ಥಿಗಳ ನೋಂದಣಿ ಕಾರ್ಯವನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವಂತೆ ಆದೇಶಿಸಿ ದಿನಾಂಕ 20/12/2017 ರವರೆಗೆ ಅವಧಿಯನ್ನು ವಿಸ್ತರಿಸಿ ನಿಗಧಿಪಡಿಸಲಾಗಿತ್ತು. ಆನ್‌ಲೈನ್ ನೋಂದಣಿ ಕಾರ್ಯದ ಅವಧಿಯನ್ನು ಮರು ವಿಸ್ತರಿಸುವಂತೆ ಕೋರಿ ಮಂಡಳಿಗೆ ಮನವಿಗಳು ಸ್ವೀಕೃತವಾಗಿರುವುದರಿಂದ ಈ ಅವಧಿಯನ್ನು ದಿನಾಂಕ 28 ಡಿಸೆಂಬರ್ 2017 ರ ವರೆಗೆ ವಿಸ್ತರಿಸಲಾಗಿದೆ.

ರಾಜ್ಯದ ಬಹುತೇಕ ಶಾಲೆಗಳಲ್ಲಿ ಆನ್ ಲೈನ್ ನೋಂದಣಿ ಕಾರ್ಯ ಮುಕ್ತಾಯವಾಗಿದ್ದು ಪ್ರತಿ ಶಾಲೆಯಲ್ಲಿ ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿಯನ್ನು ಶಾಲಾ ಹಂತದಲ್ಲಿ ಪರಿಶೀಲಿಸಬೇಕಾಗಿದೆ. ಈ ಕಾರ್ಯಕ್ಕಾಗಿ ಜಾಲತಾಣದಲ್ಲಿನ verify QPR ಆಯ್ಕೆ ಮಾಡಿ ಪ್ರಿಂಟ್ ರೂಪದಲ್ಲಿ ಬರುವ ವರದಿಯನ್ನು ಪರಿಶೀಲಿಸಿ ಸರಿಯಿದ್ದಲ್ಲಿ ಡೇಟಾವನ್ನು ಫ್ರೀಜ್ ಮಾಡುವುದು. ಪ್ರಶ್ನೆಪತ್ರಿಕೆಗಳ ಸಂಖ್ಯೆಗಳನ್ನು ಮಾಧ್ಯಮವಾರು ಪರಿಶೀಲಿಸಿದ ನಂತರ ವ್ಯತ್ಯಾಸಗಳೇನಾದರೂ ಇದ್ದಲ್ಲಿ ಅವುಗಳನ್ನು ಗುರುತಿಸಿ ತಪ್ಪಾಗಿರುವ ವಿದ್ಯಾರ್ಥಿಗಳ ನೋಂದಣಿಯನ್ನು ಪುನಃ ನೋಂದಣಿ ಮಾಡಿ ಸರಿಪಡಿಸಿ ಮತ್ತೊಮ್ಮೆ ಕ್ಯೂ.ಪಿ.ಆರ್. ಮುದ್ರಿಸಿ ಪರಿಶೀಲಿಸಿ ಸರಿ ಇರುವ ಬಗ್ಗೆ ಖಾತರಿ ಪಡಿಸಿಕೊಂಡು ಡೇಟಾ ಫ್ರೀಜ್ ಮಾಡುವುದು.

ಕ್ಯೂ.ಪಿ.ಆರ್ ಪ್ರತಿಯೊಂದನ್ನು ಧೃಡೀಕರಿಸಿ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸಲ್ಲಿಸುವುದು. ಮತ್ತೊಂದು ಪ್ರತಿಯನ್ನು ಶಾಲೆಯಲ್ಲಿ ಕಾಯ್ದಿರಿಸಿಕೊಳ್ಳುವುದು. ಪ್ರಶ್ನೆ ಪತ್ರಿಕೆ ಮುದ್ರಣವು ಆನ್ ಲೈನ್ ನೋಂದಣಿಯಂತೆ ಜರುಗುವುದರಿಂದ ಈ ಕಾರ್ಯದಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಿಸಿದವರನ್ನೇ ಜವಾಬ್ದಾರರನ್ನಾಗಿಸಲಾಗುವುದು.

ಜಿಲ್ಲಾ ನೋಡಲ್ ಅಧಿಕಾರಿಗಳು ತಮ್ಮ ಜಿಲ್ಲೆಗಳ ಶಾಲಾವಾರು ಕ್ಯೂ.ಪಿ.ಆರ್. ಗಳನ್ನು ಬ್ಲಾಕ್ ವಾರು ವಿಭಾಗೀಕರಿಸಿ ಮಂಡಳಿಗೆ ದಿನಾಂಕ 10/01/2018 ರ ಒಳಗೆ ಸಲ್ಲಿಸುವುದು.

(ಸುಮಂಗಲ. ವಿ)
ನಿರ್ದೇಶಕರು (ಪರೀಕ್ಷೆಗಳು)

ಅಗತ್ಯ ಕ್ರಮಕ್ಕಾಗಿ :

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ

ಪ್ರತಿಗಳನ್ನು

2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ, ಬೆಂಗಳೂರು

ಇವರುಗಳಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.